**ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 67/2025**

**ಫಿರ್ಯಾದುದಾರರು** ಶ್ರೀ ಬಸವೇಶ್ವರ ಕೋ-ಆಫ್‌ಕ್ರೇಡಿಟ್ ಸೊಸೈಟಿ ಲಿ.
ಮೈನಳ್ಳಿ, ತಾ : ಮುಂಡಗೋಡ.

**- ವಿರುಧ್ಧ -**

**ಆರೋಪಿತರು** ಶ್ರೀ. ಶೇಡಜಿ ವಾಸು ಚೌಹಾಣ,
ಸಾ: ಯಲ್ಲಾಪುರ ನಗರ ಠಾಣೆ -ಯಲ್ಲಾಪುರ,
ತಾ:ಯಲ್ಲಾಪುರ, ಉತ್ತರ ಕನ್ನಡ.

**ಆಪಾದನೆ.**

ಆರೋಪಿತರಾದ ನೀವು ಫಿರ್ಯಾಧಿದಾರರ ಸಹಕಾರಿ ಸೊಸೈಟಿಯಲ್ಲಿ ವೇತನ ಸಾಲವಾಗಿ ದಿನಾಂಕಃ 25-06-2020 ರಂದು ರೂ.3,30,000-00 ಗಳನ್ನು ಸಾಲದ ಖಾತೆ ಸಂಖ್ಯೆ 74 ರಲ್ಲಿ ಪಡೆದಿರುತ್ತೀರಿ, ಅಲ್ಲದೆ ಸಂಘದ ನೀತಿ ನಿಯಮಾವಳಿಗಳ ಪ್ರಕಾರ ಜಾಮೀನು ಭದ್ರತೆಯನ್ನು ನೀಡಿದ್ದಲ್ಲದೇ, ಕರಾರು ಒಡಂಬಡಿಕೆಯನ್ನು ಸಂಘಕ್ಕೆ ಬರೆದುಕೊಟ್ಟಿರುತ್ತೀರಿ. ತದನಂತರ ಸದರಿ ಸಾಲದ ಮರುಪಾವತಿ ಮಾಡುವ ಅವಧಿ ಮೂಗಿದರೂ ಕೂಡ ತಾವು ನಿಗಧಿತ ಸಮಯಕ್ಕೆ ಸಾಲವನ್ನು ಮರು ಪಾವತಿ ಮಾಡದೇ, ಕಾಲಹರಣವನ್ನು ಮಾಡಿ ಸಮಯವನ್ನು ದೂರುತ್ತಾ ಬಂದಿರುತ್ತೀರಿ. ಫಿರ್ಯಾದಿ ಸಂಘದವರು ಕಾನೂನಿನ ಅಡಿಯಲ್ಲಿ ಪ್ರದತ್ತವಾದ ಸಾಲ ವಸೂಲಿ ಕ್ರಮದಂತೆ ಅನೇಕ ಬಾರಿ ರೀತಿಯಂತೆ ತಿಳಿಸಿದರೂ ಕೂಡಾ ನೀವು ಸಕಾಲ ಸಾಲ ಮರು ಪಾವತಿ ಮಾಡದೆ ಯಾವುದೇ ಕ್ರಮವನ್ನು ಕೈಗೊಳ್ಳಲಿಲ್ಲ. ಕೊನೆಗೆ ನೀವು ಪಡೆದ ಸಾಲವನ್ನು ಮರು ಪಾವತಿ ಮಾಡಲು ಪಿರ್ಯಾದಿ ಸಂಘದವರು 2024 ರ ನವಂಬರ ತಿಂಗಳ ಮೊದಲ ವಾರದಂದು ಕೇಳಿಕೊಂಡಾಗ, ಸದರಿ ಸಾಲವನ್ನು ಮರುಪಾವತಿ ಮಾಡುವುದಾಗಿ ಒಪ್ಪಿಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ ಯಲ್ಲಾಪುರ, ಶಾಖೆಯಲ್ಲಿ ನೀವು ಹೊಂದಿರುವ ಖಾತೆಯ ಚೆಕ್ ನಂ.595824 ಒಟ್ಟು ಅಸಲು ಬಡ್ಡಿ ಸೇರಿ ರೂ.4,11,414/- ಮೊತ್ತಕ್ಕೆ ದಿನಾಂಕಃ 06/12/2024 ರಂದು ಪೋಸ್ಟ್ ಡೇಟೆಡ್ ಚೆಕನ್ನು ನೀಡಿರುತ್ತೀರಿ, ತದನಂತರ ತಮ್ಮ ಭರವಸೆಯ ಮೇರೆಗೆ ಫಿರ್ಯಾದಿದಾರರ ಸಂಘವು ದಿನಾಂಕ 06/12/2024 ರಂದು ಕೆ ಡಿ ಸಿ ಸಿ ಬ್ಯಾಂಕ ಶಾಖೆ ಮುಂಡಗೋಡ ಇವರಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ, ಸದರಿ ಬ್ಯಾಂಕಿನವರು "ಎಕ್ಸೀಡ್ ಅರೇಂಜಮೆಂಟ್ಸ್" ಎಂದು ದಿನಾಂಕ 09/12/2024 ರಂದು ಮೇಮೋದೊಂದಿಗೆ ವಾಪಸ್ಸ ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 21/12/2024 ರಂದು ತಮ್ಮ ವಕೀಲರ ಮೂಲಕ ನೋಟಸ್ ನ್ನು ನಿಮಗೆ ನೀಡಿದ್ದು, ಸದ್ರಿ ನೋಟಿಸ್ ನಿಮಗೆ ದಿನಾಂಕ: 28/12/2024 ರಂದು ಜ್ಯಾರಿಯಾಗಿದ್ದರೂ ಸಹಿತ ಚೆಕ್ಕನ ರಕಂನ್ನು ವಾಪಸ್ಸು ಮಾಡಿರುವುದಿಲ್ಲ ಆ ಮೂಲಕ ನೆಗೋಶಿಯೆಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ –

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ –

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿಃ 02-09-2025

ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿಗಳು,
ಮುಂಡಗೋಡ.